ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.448/2023**

**PW-4 CW-5**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹೇಮಣ್ಣ |
| ತಂದೆ | ಃ | ಹನುಮಂತ |
| ವಯಸ್ಸು | ಃ | 35 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಎನ್.ಗಣೇಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **21.11.2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

---

ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 03-03-2022 ರಂದು ಎನ್.ಗಣೇಕಲ್ ಅಲ್ಲಿ ಜಾತ್ರೆ ಇದ್ದು ಬೆಳಿಗ್ಗೆ 09.30 ಗಂಟೆಗೆ ನಾನು ನಾಗರಾಜನ ಮನೆ ಹತ್ತಿರ ಇದ್ದಾಗ ನಾಗರಾಜ ಮನೆ ಮುಂದೆ ಇದ್ದಾಗ ಆತನ ಅಕ್ಕ ಮರಿಯಮ್ಮ ಮನೆ ಮುಂದೆ ಕುಳಿತಿದ್ದಾಗ ಅಲ್ಲಿಗೆ ಬಂದ ನಾಗರಾಜನ ಹೆಂಡತಿ ಪಾರ್ವತಿ ಮತ್ತು ಆಕೆ ಮಾವ ಮಲ್ಲಿಕಾರ್ಜುನ ಹಾಗೂ ಲಿಂಗಮ್ಮ ಕೂಡಿ ಬಂದವರೇ ಅವರಲ್ಲಿ ಪಾರ್ವತಿ ಮನೆ ಒಳಗೆ ಹೋಗಿ ನಾಗರಾಜನ ಎದೆ ಮೇಲಿನ ಅಂಗಿ ಹಿಡಿದು ನನ್ನ ಮಗನಿಗೆ ಜೀವನಾಂಶ ಕೊಡು ಅಂತ ಕೇಳಿದಾಗ ಆಕೆ ಮಾವ ಮಲ್ಲಿಕಾರ್ಜುನ ಚಪ್ಪಲಿಯಿಂದ ಆತನ ತಲೆಗೆ ಹೊಡೆದಿದ್ದು ನಿಂಗಮ್ಮ, ಮರಿಯಮ್ಮಳ ಕೂದಲು ಹಿಡಿದು ಎಳೆದಾಡಿ ಜೀವದ ಬೆದರಿಕೆ ಹಾಕಿದ್ದು ಆಗ ನಾವು ಜಗಳ ಬಿಡಿಸಿರುತ್ತೇವೆ ಎಂದು ಪೋಲಿಸರಿಗೆ ನಿಪಿ-3 ರಂತೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.